

UASB Library

Newspaper Clippings

Monday 31-01-2022 Pg .1

Jai Kisan

ರೈತ ಮಿತ್ರ

ದಾಳಿಂಬೆ ಬೆಳೆಯಲ್ಲಿ ದುಂಡಾಣು ಅಂಗಮಾರಿ ರೋಗ ಹೆಚ್ಚಾಗುತ್ತಿದ್ದು, ಅದನ್ನು ನಿವಾರಿಸುವುದು ಹೇಗೆ?

| ಆನಂದ ಮಿಂಚೇರಿ ಹಂಚಿನಾಳ, ಲಿಂಗಸುಗೂರು ತಾಲೂಕು



ಹೊಸ ತೋಟ ಪ್ರಾರಂಭಿಸುವಾಗ ಎಚ್ಚರಿಕೆಯಿಂದ ರೋಗರಹಿತ ಸಸಿ ಅಥವಾ ಅಂಗಾಂಶ ಕೃಷಿ ಗಿಡಗಳನ್ನು ನಾಟಿಗೆ ಬಳಸುವುದು ಉತ್ತಮ. ತೋಟದ ಸುತ್ತ ಜೀವಂತ ಗಾಳಿ ತಡೆ ನಿರ್ಮಿಸಿ. ಇದರಿಂದ ರೋಗಾಣು ಮತ್ತು ಕೀಟಾಣು ಗಾಳಿ ಮೂಲಕ ತೋಟಕ್ಕೆ ಪ್ರವೇಶಿಸುವುದಿಲ್ಲ. ಶಿಫಾರಸು ಮಾಡಿದ ಪೋಷಕಾಂಶಗಳ ಜತೆಗೆ ಕೊಟ್ಟಿಗೆ ಗೊಬ್ಬರ, ಬೇವಿನ ಹಿಂಡಿ ಮುಂತಾದ ಜೈವಿಕ ಗೊಬ್ಬರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸಿ ಗಿಡದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಿ. ತೋಟವನ್ನು ಸ್ವಚ್ಛವಾಗಿಡುವುದು, ರೋಗ ಪೀಡಿತ ಎಲೆ, ಕಾಂಡ ಮತ್ತು ಕಾಯಿಗಳನ್ನು ಕಿತ್ತು ಸುಡುವುದರಿಂದಲೂ ರೋಗ ಪ್ರಸಾರ ತಡೆಗಟ್ಟಬಹುದು. ಪ್ರತಿ ಬಾರಿ ಚಾಟಣಿ ಮಾಡುವಾಗ, ಚಾಟಣಿ ಕತ್ತರಿಯನ್ನು ಪ್ರತಿ ಲೀಟರ್ ನೀರಿಗೆ 25 ಮಿ.ಲೀ. ಸೋಡಿಯಂ ಹೈಪೋಕ್ಲೋರೈಡ್ ಬೆರೆಸಿದ ದ್ರಾವಣದಲ್ಲಿ ಅದ್ದಿ ಚಾಟಣಿ ಮಾಡುವುದರಿಂದ ರೋಗಾಣು ಹರಡುವಿಕೆ ತಡೆಗಟ್ಟಬಹುದು. ನೆಲದ ಮೇಲೆ ಬಿದ್ದ ಆಳಿದುಳಿದ ಎಲೆಗಳ ಮೇಲೆ ರೋಗಾಣು ನಿರ್ವಹಿಸಲು ಎಕರೆಗೆ 10 ಕಿ.ಗ್ರಾಂ ಬ್ಲೀಚಿಂಗ್ ಪೌಡರ್ ಅನ್ನು ಧೂಳೀಕರಿಸಬೇಕು. ಪ್ರತಿ ಲೀಟರ್ ನೀರಿಗೆ 0.5 ಗ್ರಾಂ ಸ್ಟೆಪ್ಟೋಸೈಕ್ಲಿನ್ ಅಥವಾ ಸ್ಟೆಪ್ಟೋಮೈಸಿನ್ ಸಲ್ಫೇಟ್ ಅಥವಾ ಬ್ರೊಮೊಪಾಲ್ ಮತ್ತು 3.0 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಬೆರೆಸಿ ರೋಗಪೀಡಿತ ಕಾಂಡಗಳಿಗೆ ಬಳಿಯಬೇಕು. ಇದೇ ದ್ರಾವಣವನ್ನು 10 ದಿನಗಳ ಅಂತರದಲ್ಲಿ 3 ಬಾರಿ ಗಿಡಗಳಿಗೆ ಸಿಂಪಡಿಸಿ. ಗಿಡಗಳ ರೋಗನಿರೋಧಕ ಶಕ್ತಿ ಹೆಚ್ಚಿಸಲು ಪ್ರತಿ ಲೀಟರ್ ನೀರಿಗೆ 1.0 ಗ್ರಾಂ ಸತುವಿನ ಸಲ್ಫೇಟ್, ಮ್ಯಾಗ್ನೀಷಿಯಂ ಸಲ್ಫೇಟ್, ಸುಣ್ಣದ ಸಲ್ಫೇಟ್ ಮತ್ತು ಬೋರಾನ್ ಅನ್ನು ಬೆರೆಸಿ ಸಿಂಪಡಿಸಿ. ರೋಗದ ತೀವ್ರತೆ ಅಧಿಕವಾಗಿದ್ದಲ್ಲಿ ದಾಳಿಂಬೆ ಬೆಳೆಯನ್ನು ಹಸ್ತ ಬಹಾರ್ (ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಚಾಟಣಿ ಮಾಡುವುದು)ನಲ್ಲಿ ತೆಗೆದುಕೊಳ್ಳುವುದು ಸೂಕ್ತ. ಈ ಹತೋಟಿ ಕ್ರಮಗಳನ್ನು ಸಾಮೂಹಿಕವಾಗಿ ಎಲ್ಲ ರೈತರು ಆಳವಡಿಸಿದಲ್ಲಿ ರೋಗದ ನಿರ್ವಹಣೆ ಪರಿಣಾಮಕಾರಿ ಆಗಲಿದೆ.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

ತೆಂಗಿನ ಬೆಳೆಯಲ್ಲಿ ನುಸಿ ಬಾಧೆ ನಿಯಂತ್ರಿಸುವುದು ಹೇಗೆ?

| ಭರತ್ ಸಕಲೇಶಪುರ ತಾಲೂಕು

ನುಸಿಗಳು ಎಳೆಯ ಕಾಯಿಗಳ ಮೇಲೆ ದಾಳಿಯಿಡಲು ಆರಂಭಿಸುತ್ತವೆ. ಕಾಯಿ ಬೆಳೆದು ದಪ್ಪವಾದಂತೆಲ್ಲ ತೊಟ್ಟಿನ ಒಳಗಿನಿಂದ ತ್ರಿಕೋಣಾಕಾರದ ಬಿಳಿ ಮಚ್ಚೆಗಳು ಕಾಣಿಸುತ್ತವೆ. ನಂತರ ಕಾಯಿಗಳ ಮೇಲೆ ಉದ್ದನೆಯ ಬಿರುಕು ಉಂಟಾಗುತ್ತವೆ. ಈ ಬಿರುಕುಗಳಿಂದ ಅಂಟು ಪದಾರ್ಥ ಹೊರಬರುತ್ತದೆ. ಬಾಧೆಗೊಳಗಾದ ಎಳೆಯ ಕಾಯಿಗಳು ಉದುರುತ್ತವೆ.



ನಿರ್ವಹಣೆ: ತಾತ್ಕಾಲಿಕ ಶಿಫಾರಸಿನಂತೆ ತೆಂಗಿನ ಮರಗಳು ನುಸಿಯ ಬಾಧೆ ತಡೆದುಕೊಳ್ಳುವ ಶಕ್ತಿಯನ್ನು ಪಡೆಯಲು ಮ್ಯುರೇಟ್ ಆಫ್ ಪೊಟ್ಯಾಷ್ 3.5 ಕಿ.ಗ್ರಾಂ, ಜಿಪ್ಸಮ್ 1 ಕಿ.ಗ್ರಾಂ, ಬೊರ್ಯಾಕ್ಸ್ 50 ಗ್ರಾಂ ಮತ್ತು ಬೇವಿನ ಹಿಂಡಿ 5 ಕಿ.ಗ್ರಾಂ ಇವುಗಳೊಂದಿಗೆ ಶಿಫಾರಸು ಮಾಡಿದ ಸಾರಜನಕ ಮತ್ತು ರಂಜಕ ಗೊಬ್ಬರಗಳನ್ನು ವರ್ಷದಲ್ಲಿ ಎರಡು ಬಾರಿ ಸಮಪ್ರಮಾಣದಲ್ಲಿ ಮಡಿಗಳಲ್ಲಿ ಕೊಡಬೇಕು. ನುಸಿ ಬಾಧೆಯ ತೀವ್ರತೆ ನೋಡಿಕೊಂಡು ವರ್ಷದಲ್ಲಿ ಮೂರು ಬಾರಿ, ಏಪ್ರಿಲ್-ಮೇ, ಅಕ್ಟೋಬರ್-ನವೆಂಬರ್ ಮತ್ತು ಡಿಸೆಂಬರ್-ಜನವರಿಯಲ್ಲಿ ನೀರಿನಲ್ಲಿ ಕರಗುವ ಗಂಧಕ 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಕಾಯಿ ಗೊಂಚಲಿಗೆ ಸಿಂಪಡಿಸಬೇಕು ಅಥವಾ ನಿಮಾಝೋಲ್ 7.5 ಮಿ.ಲೀ. ಅಥವಾ ಇಕೊನೀಮ್‌ಫ್ಲಸ್ 10 ಮಿ.ಲೀ. ಅನುಕ್ರಮವಾಗಿ ಸಮ ಪ್ರಮಾಣದ ನೀರಿನಲ್ಲಿ ಬೆರೆಸಿ ಬೇರಿನ ಮೂಲಕ ಗಿಡಗಳಿಗೆ ಉಣಿಸಬೇಕು.

| ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

31-01-2022
Vv Pg 11

ಮಂಜೇಶ್ವರದ ಕೋಳ್ಯೂರಿನಲ್ಲಿ ಉತ್ಸಾಹಿ ಯುವ ಕೃಷಿಕನ ಸಾಧನೆ

ತೋಡಿಗೆ ವಿನೂತನ ಡ್ರಮ್ ಡ್ಯಾಂ

■ ವಿಜಯವಾಣಿ ಸುದ್ದಿಜಾಲ ಕಾಸರಗೋಡು

ಬೇಸಿಗೆಯಲ್ಲಿ ಹೊಳೆ, ತೋಡುಗಳಲ್ಲಿ ಹರಿಯುವ ನೀರನ್ನು ತಡೆಗಟ್ಟಿ ಕೃಷಿ ಪ್ರದೇಶಗಳಿಗೆ ಉಣಿಸುವುದು ಸಾಮಾನ್ಯ. ಇದಕ್ಕಾಗಿ ಕಿರು ಆಣೆಕಟ್ಟು, ವೆಂಟೆಡ್ ಕ್ರಾಸ್ ಬಾರ್(ವಿಸಿಬಿ), ಕಲ್ಲು- ಮಣ್ಣು ಮಿಶ್ರಣದ ಕಟ್ಟ ಸಹಿತ ನಾನಾ ಬಗೆಯ ಕಟ್ಟಗಳ ನಿರ್ಮಾಣವಾಗುತ್ತಿದ್ದರೆ, ಮಂಜೇಶ್ವರ ಸನಿಹದ ಕೋಳ್ಯೂರಿನ ಉತ್ಸಾಹಿ ಯುವಕ 'ಡ್ರಮ್ ಡ್ಯಾಂ' ಎಂಬ ಹೊಸ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಬೆಂಗಳೂರು ಮೂಲದ ಖಾಸಗಿ ಕಂಪನಿಯ ಮಂಗಳೂರು ಕಚೇರಿಯಲ್ಲಿ ಉದ್ಯೋಗದಲ್ಲಿರುವ ಮೀಂಜ ಪಂಚಾಯಿತಿ ಕೊಮ್ಮೆ ಕೃಷ್ಣಪ್ರಸಾದ್ ಲಾಕ್ ಡೌನ್, ವರ್ಕ್‌ಫ್ರಂ ಹೋಮ್ ವೇಳೆ ತಮ್ಮ ತೋಟದ ಕಡೆಗೂ ಒಂದಷ್ಟು ಸಮಯ ಮೀಸಲಿರಿಸಿ ನೀರು ಶೇಖರಣೆಯ ಈ ಹೊಸ ತಂತ್ರಜ್ಞಾನ ಕಂಡುಕೊಂಡಿದ್ದಾರೆ. ತಮ್ಮ ಕೃಷಿ ಭೂಮಿಯಲ್ಲಿ ಹರಿಯುವ ಕೋಳ್ಯೂರು ತೋಡಿಗೆ ಅಡ್ಡಲಾಗಿ ಈ ರೀತಿಯ ಡ್ರಮ್ ಡ್ಯಾಂ ನಿರ್ಮಿಸಿ 500 ಮೀ. ವ್ಯಾಪ್ತಿವರೆಗೂ ಇದರ ಪ್ರಯೋಜನ ಲಭಿಸುವಂತೆ ಮಾಡಿಕೊಂಡಿದ್ದಾರೆ.

ಕಳೆದ ಐದಾರು ವರ್ಷಗಳಿಂದ ಕಲ್ಲು- ಮಣ್ಣು ಪೇರಿಸಿ, ಮರದ ಗೂಟ ಹಾಕಿ ಕಟ್ಟ ನಿರ್ಮಿಸುತ್ತಿದ್ದರು. ಅದಕ್ಕಿಂತ ತುಂಬಾ ಸುಲಭದಲ್ಲಿ ಡ್ರಮ್ ಡ್ಯಾಂ ನಿರ್ಮಿಸಬಹುದು ಎಂಬುದನ್ನು ಯಶಸ್ವಿಯಾಗಿ ಮಾಡಿ ತೋರಿಸಿದ್ದಾರೆ ಕೃಷ್ಣ ಪ್ರಸಾದ್.

★ಕಟ್ಟ ನಿರ್ಮಾಣ ಹೇಗೆ?: 35 ಅಡಿ ಅಗಲವಿರುವ ತೋಡಿನ ತಳಭಾಗ ಸಮತಟ್ಟುಗೊಳಿಸಿ, ತೋಟಕ್ಕೆ ಔಷಧ ಸಿಂಪಡಿಸಲು ಬಳಸುವ ಹಳೇ ಬ್ಯಾರಲ್‌ಗಳನ್ನು ಜೋಡಿಸಬೇಕು. ಇದರೊಳಗೆ ಮರಳು ತುಂಬಿ, ವಾಲದಂತೆ ಅಡಕೆ ಮರ ಅಡ್ಡಕ್ಕಿರಿಸಿ ಸಪೋರ್ಟ್ ಕೊಡಬೇಕು. ಇದರ ಮುಂಭಾಗಕ್ಕೆ ಫೈಬರ್ ಶೀಟ್(ಎಚ್ ಡಿಪಿಇ ಹಾಳೆ) ಅಳವಡಿಸಲಾಗುತ್ತದೆ. ಡ್ರಮ್‌ಗಳ ಸಂದಿಗೆ ಹಾಗೂ ತಳಭಾಗಕ್ಕೆ ಬಾಳೆ ಚಾಂಬಾರ್ ತುಂಬಲಾಗುತ್ತದೆ. ಇದು ಬ್ಯಾರಲ್‌ಗಳಿಗೆ ಹಾನಿಯಾಗದಂತೆಯೂ ತಡೆಯುತ್ತದೆ. ಮರಳು ತುಂಬಿದ ಪ್ರತಿ ಬ್ಯಾರೆಲ್ 350ರಿಂದ 400 ಕೆ.ಜಿ.ವರೆಗೆ ಭಾರ



ಡ್ರಮ್ ಡ್ಯಾಂ ನನಗೆ ಹೊಳೆದ ಆಲೋಚನೆ. ತೋಡಿನ ಅಗಲ ಹೊಂದಿಕೊಂಡು ಹಳೇ ಬ್ಯಾರಲ್‌ಗಳನ್ನು ಸಂಗ್ರಹಿಸಿಟ್ಟುಕೊಂಡಲ್ಲಿ, ಫೈಬರ್ ಶೀಟ್ ಹಾಗೂ ಕೂಲಿ ಸಹಿತ ಐದಾರು ಸಾವಿರ ರೂ. ಖರ್ಚಿನಲ್ಲಿ ಡ್ರಮ್ ಡ್ಯಾಂ ಸಿದ್ಧಪಡಿಸಬಹುದು. ಮುಂದಿನ ವರ್ಷದಿಂದ ತೋಡಿನ ಎರಡೂ ಬದಿ ಸ್ವಲ್ಪ ಕಟ್ಟ ಕಟ್ಟಿ, ಇದರ ಮಧ್ಯೆ ಡ್ರಮ್ ಪೇರಿಸಿ, ಸುಧಾರಿತ ರೀತಿಯಲ್ಲಿ ಕಟ್ಟ ಕಟ್ಟುವ ಯೋಜನೆಯಿದೆ.

| ಕೃಷ್ಣಪ್ರಸಾದ್ ಕೊಮ್ಮೆ ಉತ್ಸಾಹಿ ಯುವ ಕೃಷಿಕ

ಹೊಂದುವುದರಿಂದ ತಳಭಾಗದಲ್ಲಿ ದೃಢವಾಗಿ ಕುಳಿತಿರುತ್ತದೆ. ಜತೆಗೆ ಅಡಕೆ ಮರದ ಸಪೋರ್ಟ್‌ನಿಂದ ಕಟ್ಟ ಮತ್ತಷ್ಟು ಗಟ್ಟಿಯಾಗುತ್ತದೆ. ಸಣ್ಣ ತೋಡುಗಳಲ್ಲಿ, ನೀರಿನ ರಭಸ ಕಡಿಮೆ ಇರುವ ಪ್ರದೇಶದಲ್ಲಿ ಇಂತಹ ಡ್ಯಾಮ್‌ಗಳನ್ನು ನಿರ್ಮಿಸಬಹುದು. ಒಂದು ಬಾರಿ ಡ್ರಮ್ ಖರೀದಿಗೆ ವೆಚ್ಚವಾಗುತ್ತದೆ. ಮಳೆಗಾಲದಲ್ಲಿ ಪ್ರತಿವರ್ಷ ಇದನ್ನು ತೆರವುಗೊಳಿಸಿ, ಮರುಬಳಕೆ ಮಾಡಿಕೊಳ್ಳಬಹುದು. ಬ್ಯಾರಲ್‌ನ ಮರಳನ್ನೂ ಒಂದೆಡೆ ರಾಶಿ ಹಾಕಿ ಮುಂದಿನ ವರ್ಷಕ್ಕೆ ಬಳಸಿಕೊಳ್ಳಲು ಸಾಧ್ಯವಿದೆ.

31-01-2022
Vv Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in

ಲಾಭ ಕೊಡುವ 4 ಕೃಷಿ ಉಪ ಕಸುಬು!



ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com

ಖಡಕ್ ನಾಥ್ ಕೋಳಿ...! ಏನಪ್ಪಾ ಇದು, ಹೆಸರೇ ಇಷ್ಟು ವಿಚಿತ್ರವಾಗಿದೆಯಲ್ಲ ಅಂತ ಕೇಳ್ತಿದ್ದೀರಾ? ಹೌದು. ಇದು ಮಧ್ಯಪ್ರದೇಶ ಮೂಲದ ಬುಡಕಟ್ಟು ಜನಾಂಗದವರು ಸಾಕಣೆ ಮಾಡುತ್ತಿದ್ದ ಕೋಳಿಯ ವೆರೈಟಿ. 2018ರ ನಂತರದಲ್ಲಿ ಇದು ದೇಶಾದ್ಯಂತ ಮುನ್ನೆಲೆಗೆ ಬಂದಿದೆ. ಹಲವು ಭಾಗಗಳಲ್ಲಿ ರೈತರು ಈ ಕೋಳಿಯನ್ನು ಸಾಕಾಣಿಕೆ ಮಾಡಿ ಲಾಭ ಗಳಿಸುತ್ತಿದ್ದಾರೆ. ಕಡುಕಪ್ಪು ಬಣ್ಣದ ಈ ಕೋಳಿಯ ಮಾಂಸವೂ ಕಪ್ಪು. ಔಷಧೀಯ ಗುಣಗಳು ಹೆಚ್ಚಿಗೆ ಇರುವುದರಿಂದ ಈ ಕೋಳಿಯ ಮಾಂಸ ಮತ್ತು ಮೊಟ್ಟೆಗೆ ಮಾರುಕಟ್ಟೆಯಲ್ಲಿ ಸಖತ್ ಬೇಡಿಕೆ ಇದೆ. ಕೋಳಿ ಸಾಕಣೆ ಮಾಡಿ ಒಳ್ಳೆಯ ಆದಾಯ ಗಳಿಸಬೇಕು ಅನ್ನೋರಿಗೆ ಖಡಕ್ ನಾಥ್ ಒಳ್ಳೆಯ ಆಯ್ಕೆ. ಖಡಕ್ ನಾಥ್ ಕೋಳಿ ಸಾಕಣೆಗೆ ಫಾರಂ ಕೋಳಿ ಸಾಕಣೆಗೆ ಬೇಕಾಗುವಷ್ಟು ಹಣ ಅಗತ್ಯವಿಲ್ಲ. ಇಲ್ಲಿ ಸಾಕಾಣಿಕೆ ಖರ್ಚು ಕಡಿಮೆ ಇರುವುದರಿಂದ ಹೆಚ್ಚು ಲಾಭದಾಯಕ. ಖಡಕ್ ನಾಥ್ ಕೋಳಿಯ 1 ಕೆ.ಜಿ. ಮಾಂಸಕ್ಕೆ ಮಾರುಕಟ್ಟೆಯಲ್ಲಿ 700ರಿಂದ 800 ರೂ. ಬೆಲೆ ಇದೆ. ನಿಮ್ಮ ಬಳಿ ಸುಮಾರು 2 ಸಾವಿರ ಚದರಡಿ ವಿಸ್ತೀರ್ಣದ ಜಾಗವಿದ್ದು, ಅಲ್ಲಿ ಒಂದು ಸಾವಿರ ಖಡಕ್ ನಾಥ್ ಕೋಳಿಗಳನ್ನು ಸಾಕಣೆ ಮಾಡಿದರೆ 5 ತಿಂಗಳಿಗೆ ಬರೋಬ್ಬರಿ 8 ಲಕ್ಷ ರೂ. ಆದಾಯ ಗಳಿಸಬಹುದು. ಈ ಲೆಕ್ಕಾಚಾರ ಕಾಲ್ಪನಿಕ ಅಂದಾಜಲ್ಲ, ಕರುನಾಡ ರೈತರೊಬ್ಬರು ಇಷ್ಟು ಆದಾಯ ಗಳಿಸಲು ಸಾಧ್ಯ ಎನ್ನುವುದನ್ನು ಸಾಧಿಸಿ ತೋರಿಸಿದ್ದಾರೆ.

ಬಾತುಕೋಳಿ ಸಾಕಣೆ ಮಾಡಿ, ಕೈ ತುಂಬಾ ಗಳಿಸಿ: ಬಾತುಕೋಳಿ ಸಾಕಣೆ ಭಾರತದಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ದೇಶದಲ್ಲಿರುವ ಕೋಳಿಗಳ ಒಟ್ಟು ಸಂಖ್ಯೆಯಲ್ಲಿ ಶೇ.10 ಪಾಲು ಬಾತುಕೋಳಿಗಳದ್ದೇ ಇದೆ. ಬಾತುಕೋಳಿಗಳು ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಮೊಟ್ಟೆಗಳ ಸಂಖ್ಯೆಗೆ ಶೇ.7ರಿಂದ ಶೇ.8 ಕೊಡುಗೆ ನೀಡುತ್ತವೆ. ಮಾಂಸಕ್ಕಾಗಿಯೂ ಬಾತುಕೋಳಿಗಳನ್ನು ಸಾಕಬಹುದು. ಇತ್ತೀಚಿನ ದಿನಗಳಲ್ಲಿ ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚುತ್ತಿರುವುದರಿಂದ ಆಹಾರಾಭ್ಯಾಸ ಬದಲಾಗುತ್ತಿವೆ. ದಿನ ಕಳೆದಂತೆ ಬಾತುಕೋಳಿಯ ಮಾಂಸ ಮತ್ತು ಮೊಟ್ಟೆಗೆ ಬೇಡಿಕೆ ಹೆಚ್ಚುತ್ತಿದೆ. ಆದ್ದರಿಂದ ಕೃಷಿಯ ಜತೆಗೆ ಉಪಕಸುಬಾಗಿ ಅಥವಾ ಪೂರ್ಣಪ್ರಮಾಣದಲ್ಲಿ ವಾಣಿಜ್ಯವಾಗಿ ಬಾತುಕೋಳಿ ಸಾಕಣೆ ಒಂದು ಒಳ್ಳೆಯ ಆಯ್ಕೆ ಎಂದು ಪರಿಗಣಿಸಬಹುದು. ಬಾತುಕೋಳಿ ವಿವಿಧ ಹವಾಗುಣಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಹೆಚ್ಚಿನ ಕಾಳಜಿ ಅವಶ್ಯಕತೆ ಇಲ್ಲದೇ ಹಿತ್ತಲು ಪದ್ಧತಿಯಲ್ಲಿ ಸಾಕಬಹುದು. ಇವುಗಳಿಗೆ ವಸತಿ ಸೌಲಭ್ಯ ಕಲ್ಪಿಸುವುದು ಕೋಳಿಗಳಿಗೆ ವಸತಿ ನಿರ್ಮಿಸುವುದಕ್ಕಿಂತ ಕಡಿಮೆ ಖರ್ಚಿನದಾಗಿರುತ್ತದೆ.

ಹಂದಿ ಸಾಕಣೆಯಲ್ಲಿ ಲಾಭ ಗಳಿಸುವುದು ಹೇಗೆ?: ಮಾಂಸ ಪ್ರಿಯರು ಹೆಚ್ಚಾಗಿ ಕುರಿ, ಕೋಳಿ, ಮೇಕೆ, ಮೀನು ಜತೆಗೆ ಹಂದಿ ಮಾಂಸ ಕೂಡ ಇಷ್ಟ ಪಡ್ತಾರೆ. ಹಂದಿ ಮಾಂಸ ಬಹಳ ರುಚಿಕರ ಮತ್ತು ಸ್ವಾದಿಷ್ಟಕರ ಕೂಡ. ಹಿಂದೆಲ್ಲ ಹಂದಿ ಮಾಂಸಕ್ಕೆ ಅಷ್ಟೇನೂ ಬೇಡಿಕೆ ಇಲ್ಲದ ಕಾರಣ ಈ ಮಾಂಸಕ್ಕೆ ಬೆಲೆಯೂ ಅಷ್ಟೇನು ಜಾಸ್ತಿ ಇರಲಿಲ್ಲ. ಆದರೆ, ಈಗ ಹಂದಿ ಮಾಂಸದ ಅನುಕೂಲಗಳನ್ನು ಜನರು ಅರಿತ ಕಾರಣದಿಂದ ಹಂದಿ ಮಾಂಸಕ್ಕೆ ಬೇಡಿಕೆ



ಜತೆ ಬೆಲೆಯೂ ಹೆಚ್ಚಾಗುತ್ತಿದೆ. ಕರ್ನಾಟಕದಲ್ಲಿ ನೂರಾರು ಜನರು ಹಂದಿ ಸಾಕಣೆಯನ್ನು ಮುಖ್ಯ ಉದ್ಯಮವನ್ನಾಗಿಸಿಕೊಂಡಿದ್ದಾರೆ. ಇನ್ನು ಕೆಲವರು ಇದನ್ನು ಕೃಷಿ ಜತೆ ಉಪ ಕಸುಬಾಗಿ ಕೈಗೆತ್ತಿಕೊಂಡಿದ್ದಾರೆ. ಹಂದಿ ಸಾಕಣೆಯನ್ನು ದೊಡ್ಡ ಅಥವಾ ಸಣ್ಣ ಪ್ರಮಾಣದಲ್ಲಿ ಮಾಡಿದರೂ ಲಾಭವೇ. ಹಂದಿ ಸಾಕಣೆಗೆ ಹೆಚ್ಚು ಖರ್ಚಿಲ್ಲ. ಆದರೆ ಹಂದಿ ಮಾಂಸಕ್ಕೆ ಬೇಡಿಕೆ ಇದೆ. ಇದನ್ನು ಅರಿತಿರುವ ರೈತರು, ಉದ್ಯಮಿಗಳು ಹಂದಿ ಸಾಕಣೆಯಲ್ಲಿ ತೊಡಗಿ ವರ್ಷಕ್ಕೆ ಕೆಲ ಲಕ್ಷಗಳಿಂದ ಕೋಟ್ಯಂತರ ರೂಪಾಯಿವರೆಗೆ ಆದಾಯ ಗಳಿಸುತ್ತಿದ್ದಾರೆ. ಪ್ರತಿ ವರ್ಷ ಭಾರತದಲ್ಲಿ 12 ಸಾವಿರ ಕೋಟಿ ರೂ. ಮೌಲ್ಯದ ಹಂದಿ ಮಾಂಸ ಮಾರಾಟವಾಗುತ್ತಿದೆ. ಹಂದಿ ಮಾಂಸದ ಇಂದಿನ ರಿಟೇಲ್ ಬೆಲೆ ಕೆಜಿಗೆ 120ರಿಂದ 350 ರೂ. ಮತ್ತೊಂದು ವಿಷಯ ಏನಂದ್ರೆ, ಹಂದಿ ಸಾಕಣೆಗೆ ನಿಮಗೆ ವಿಶಾಲವಾದ ಜಾಗದ ಅಗತ್ಯ ಇಲ್ಲ. ಕೇವಲ ಅರ್ಧ ಎಕರೆಯಲ್ಲಿ 2,000 ಹಂದಿಗಳನ್ನು ಸಾಕಬಹುದು. ಒಂದು ಆರೋಗ್ಯಕರ ಹಂದಿಯ ತೂಕ 150 ಕೆಜಿಯಷ್ಟಿರುತ್ತೆ.

ಮುರ್ರಾ ಎಮ್ಮೆ ಸಾಕಿ, ಲಕ್ಷ ಲಕ್ಷ ಗಳಿಸಿ; ಕೃಷಿಯ ಜತೆಗೆ ಹೈನೋದ್ಯಮ ಮಾಡಬೇಕು ಎನ್ನುವವರಿಗೆ ಮುರ್ರಾ ಎಮ್ಮೆ ಸಾಕಣೆ ಒಳ್ಳೆಯ ಆಯ್ಕೆ. ದಿನಕ್ಕೆ 16ರಿಂದ 25 ಲೀಟರ್ ಹಾಲು ಕೊಡುವ ಮುರ್ರಾ ಎಮ್ಮೆಗಳು ರೈತರ ಜೇಬು ತುಂಬಿಸುತ್ತಿವೆ. ಹರಿಯಾಣದ ಈ ತಳಿ, ಹಾಲು ಉತ್ಪಾದನೆಗೆ ಹೆಸರಾಗಿರುವುದಲ್ಲದೆ, ಉತ್ತಮ ರೋಗ ನಿರೋಧಕ ಶಕ್ತಿ ಹೊಂದಿದ್ದು ದಕ್ಷಿಣ ಭಾರತದ ಹವಾಗುಣದಲ್ಲೂ ಸಾಕಬಹುದಾಗಿದೆ. ವೃತ್ತಿಪರ ಡೇರಿ ಫಾರಂ ಆರಂಭಿಸಬೇಕು ಎನ್ನುವವರಿಗೆ ಮುರ್ರಾ ತಳಿ ಹೇಳಿ ಮಾಡಿಸಿದಂತಿದೆ. ಸುಮಾರು 300 ದಿನಗಳ ವರೆಗೆ ಹಾಲು ಕೊಡುವ ಮುರ್ರಾ 12 ವರ್ಷಗಳ ಕಾಲ ಬದುಕುತ್ತದೆ. ಹಾಲಿನ ಉತ್ಪಾದನೆ ಸಾಮರ್ಥ್ಯದ ಆಧಾರದಲ್ಲಿ ಮುರ್ರಾ ಬೆಲೆ 1 ಲಕ್ಷ ರೂ.ನಿಂದ 1.5 ಲಕ್ಷ ರೂ.ವರೆಗೆ ಇದೆ. ಮುರ್ರಾ ಎಮ್ಮೆ ಸಾಕಲು ಹಸಿ ಹುಲ್ಲು, ಒಣ ಹುಲ್ಲು, ಫೀಡ್ಸ್ ಎಲ್ಲ ಸೇರಿ ಪ್ರತಿ ದಿನಕ್ಕೆ 100ರಿಂದ 120 ರೂ. ಖರ್ಚು ಬರುತ್ತದೆ. ಆದರೆ, ದಿನಕ್ಕೆ 25 ಲೀಟರ್‌ವರೆಗೆ ಹಾಲು ಕರೆಯುವುದರಿಂದ ಈ ಖರ್ಚು ದೊಡ್ಡದಲ್ಲ.

ಫೈನಾನ್ಷಿಯಲ್ ಫ್ರೀಡಂ ಆ್ಯಪ್‌ನಲ್ಲಿವೆ ಹತ್ತಾರು ಕೋರ್ಸ್

ಫೈನಾನ್ಷಿಯಲ್ ಫ್ರೀಡಂ ಆ್ಯಪ್‌ನಲ್ಲಿ ಹಣಕಾಸು ನಿರ್ವಹಣೆ, ಕೃಷಿ ಮತ್ತು ಬಿಸಿನೆಸ್‌ಗೆ ಸಂಬಂಧಿಸಿದ 500ಕ್ಕೂ ಹೆಚ್ಚು ಕೋರ್ಸ್‌ಗಳಿವೆ. ನಿರ್ದಿಷ್ಟ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಿರುವವರೇ ಕೋರ್ಸ್‌ನಲ್ಲಿ ಮಾರ್ಗದರ್ಶಕರಾಗಿದ್ದಾರೆ. ಕಡಿಮೆ ಬಂಡವಾಳದಲ್ಲಿ ಮಾಡಬಹುದಾದ ಲಾಭದಾಯಕ ಬಿಸಿನೆಸ್ ಗಳು, ಕಡಿಮೆ ಕೃಷಿ ಭೂಮಿಯಲ್ಲಿ ಹೆಚ್ಚು ಲಾಭ ಗಳಿಸೋದು ಹೇಗೆ? ನಮ್ಮ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳೋದು ಹೇಗೆ? ಎನ್ನುವ ಬಗ್ಗೆ ಕೋರ್ಸ್‌ನಲ್ಲಿ ವಿಸ್ತೃತವಾದ ಮಾಹಿತಿ ಇದೆ. ಹಾಗಾದ್ರೆ ಇನ್ನೇಕೆ ತಡ ಈಗಲೇ ಫೈನಾನ್ಷಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ, ನಿಮ್ಮ ಬದುಕಿನ ಆದಾಯದ ದಾರಿಯನ್ನು ಕಂಡುಕೊಂಡು ಜೀವನದಲ್ಲಿ ಯಶಸ್ವಿಯಾಗಿ.

ಮೇಕಪ್ ಆರ್ಟಿಸ್ಟ್, ಆಯಿಲ್ ಮಿಲ್ ಬಿಸಿನೆಸ್ ಬಗ್ಗೆ ಕಾರ್ಯಾಗಾರ

ಇಂಡಿಯನ್ ಮನಿ ಡಾಟ್ ಕಾಂನ ಫೈನಾನ್ಷಿಯಲ್ ಫ್ರೀಡಂ ಆ್ಯಪ್ ವತಿಯಿಂದ ಮೇಕಪ್ ಆರ್ಟಿಸ್ಟ್ ಮತ್ತು ಗಾಣದ ಎಣ್ಣೆ (ಆಯಿಲ್ ಮಿಲ್) ಬಿಸಿನೆಸ್ ತರಬೇತಿ ಜತೆ ಉದ್ಯಮ ಮಾರ್ಗದರ್ಶನ ಕಾರ್ಯಾಗಾರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ- ಮೊ.ಸಂ. 7975465873

Irrigation projects get a booster dose

Approval granted for two ambitious schemes costing Rs 5,486 crore

The Basavaraj Bommai government has accorded approvals to many schemes of the Minor Irrigation department that promise to make available more water for agriculture and drinking purposes.

Two of them are ambitious schemes that are worth Rs 5,486 crore.

The J C Madhuswamy-led Minor Irrigation department has obtained administrative approval for the much-anticipated Paschima Vahini project, which languished for years.

A master plan for the Paschima Vahini project has been prepared. According to this, 1,348 vented dams will be constructed in stages to stop water of the west-flowing rivers from joining the sea and to utilize the same for agricultural activity and drinking water purposes. The project will cost an estimated Rs 3,986 crore over next five years and works worth Rs 500 crore will be taken up to begin with.

Karnataka has at least nine west-flowing rivers. They include Mahadayi, Kali, Gangavalli (Bedthi), Aghanashini, Sharavathi, Chakra, Varahi, Netravathi and Barapole. In addition to these main river basins, there are other independent catchments in the west-flowing river system.

According to Madhuswamy, vented dams will be constructed in Dakshina Kannada, Udupi and Uttara Kannada districts to tap the potential of the west-flowing rivers that are not covered under any inter-state water dispute tribunal.

The vented dams will have automatic gates that will open when there is an overflow of the water. Hundreds of acres of land can be provided with water while also ensuring groundwater recharge. A total of 1,348 locations have been identified for the vented dams. The water that would otherwise get wasted can be stored and used.

Another ambitious project for which an administrative approval order is being issued is the Khar land scheme for the state's coastal region. The master plan for this project, which is estimated to cost Rs 1,500 crore, has received in-principle approval and an action plan for works worth Rs 300 crore is ready.

Under the Khar land scheme, flap gates are proposed to be constructed to prevent the back surge or ingress of salt water due to high tides and floods in the rivers of the coastal area of Uttara Kannada district.



> Vented dams will be constructed in Dakshina Kannada, Udupi and Uttara Kannada districts to tap the potential of the west-flowing rivers that are not covered under any inter-state water dispute tribunal.
>
> **J C MADHUSWAMY**
> Minor Irrigation Minister

Explaining further, Madhuswamy said when the sea water gains force and enters a river stream, the river water gets converted as salt water, making it useless. Therefore, a dam-like structure called 'khar land' will be constructed that will make sure that salt water does not enter the river water while allowing only the excess sweet water to flow into the sea. The water can be made available for irrigation and drinking.

In addition to this, the khar land scheme will also benefit prawn culture. According to the minister, at specific locations, water will be allotted for the purpose of prawn culture. Prawns exported from Karnataka see much demand. So, in addition to fish culture, the project will encourage prawn culture as well.

Lift irrigation

The ultimate irrigation potential in Karnataka is assessed as 45 lakh hectares from surface water sources. Out of this, it is estimated that 10 lakh hectares can be irrigated from Minor Irrigation projects.

As the name suggests, lift irrigation schemes involve lifting water from rivers, streams and other surface water sources to an elevated area, and then providing gravity flow to irrigate lands of farmers.

At present, there are 401 lift irrigation projects under the jurisdiction of the Minor Irrigation department. Of them, there are 247 projects in the districts of Belagavi, Dharwad, Gadag, Haveri, Uttara Kannada, Vijayapura, Bagalkot, Kalaburagi, Yadgir, Bidar, Ballari, Vijayanagar, Koppal and Raichur covering 68,697 hectares.

Another 154 projects are in Bengaluru Urban, Bengaluru Rural, Ramanagara, Davangere, Kolar, Chikkaballapur, Shivamogga, Mysuru, Chamarajanagar, Mandya, Hassan, Chikkamagaluru, Dakshina Kannada, Udupi and Kodagu covering an extent of 24,085 hectares.

Prominent lift irrigation projects that are under implementation include the Sasalatti Shivalingeshwara project estimated to cost Rs 266 crore. This involves lifting water from Krishna river near the Halingali village in Rabakavi-Banahatti taluk of Bagalkot district to the Ghataprabha left bank canal.

Another significant scheme is the Mantooru Mahalakshmi lift irrigation project that is expected to cost Rs 228 crore. This also involves lifting water from Krishna river near the Galagali village in Jamakhandi taluk of Bagalkot district to the Ghataprabha left bank canal.

31-01-2022
Dec Hrd Pg 07

ಗಂಗಾವತಿ, ಸಿಂಧನೂರು, ರಾಯಚೂರು ಹಾಗೂ ಕಂಪ್ಲಿ ಭಾಗದಿಂದ ಗೊಬ್ಬರ ಖರೀದಿಗೆ ಒಲವು

ಸಗಣಿ ಗೊಬ್ಬರಕ್ಕೆ ಭಾರಿ ಬೇಡಿಕೆ

■ ಶ್ರೀಕಾಂತ ಸರಗಣಾಚಾರಿ

ಕುಷ್ಟಗಿ: ಸಗಣಿ ಗೊಬ್ಬರಕ್ಕೆ ಭಾರಿ ಬೇಡಿಕೆ ಬಂದಿದೆ. ಸ್ಥಳೀಯವಾಗಿ ಸಗಣಿ ಗೊಬ್ಬರ ಸಿಗುತ್ತಿಲ್ಲ ಎಂದು ರೈತರು ಮಧ್ಯವರ್ತಿಗಳ ಮೂಲಕ ನೀರಾವರಿ ಪ್ರದೇಶಗಳಾದ ಗಂಗಾವತಿ, ಸಿಂಧನೂರು, ರಾಯಚೂರು, ಕಂಪ್ಲಿ ಭಾಗದಿಂದ ಮಿನಿ ಲಾರಿ ಮೂಲಕ ಸಗಣಿ ಗೊಬ್ಬರ ಖರೀದಿಸಿ, ಹೊಲಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳಲಾಗುತ್ತಿದೆ.

ಹೆಚ್ಚಿನ ಇಳುವರಿ ಪಡೆಯುವ ಭರಾಟೆಯಲ್ಲಿ ರಸಾಯನಿಕ ಗೊಬ್ಬರ ಬಳಕೆಯಿಂದ ಭೂಮಿ ತನ್ನ ನೈಜ್ಯ ಫಲವತ್ತತೆ ಕಳೆದುಕೊಳ್ಳುತ್ತಿರುವ ಹೊತ್ತಲ್ಲಿ, ಗ್ರಾಮೀಣ ಭಾಗದ ರೈತರು ಮತ್ತೆ ಸಗಣಿ ಗೊಬ್ಬರದತ್ತ ಒಲವು ತೋರಿದ್ದಾರೆ.

ಮುದೇನೂರು ಸೇರಿ ಸುತ್ತಮುತ್ತಲಿನ ಗ್ರಾಮಗಳ ರೈತರು ಸಗಣಿ ಗೊಬ್ಬರ ಬಳಕೆಗೆ ಮುಂದಾಗಿದ್ದಾರೆ. ಪ್ರತಿ ವರ್ಷ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗೆ ಭೂಮಿ ಹದಗೊಳಿಸಿ, ರಂಟೆ, ಕುಂಟೆ ಹೊಡೆದು ಸ್ವಚ್ಛಗೊಳಿಸಿ ಹೊಲಕ್ಕೆ ಸಗಣಿ ಗೊಬ್ಬರ ಹಾಕಿ ಬಿತ್ತನೆಗೆ ಭೂಮಿ ಹದ ಮಾಡಿಕೊಳ್ಳುತ್ತಿದ್ದಾರೆ.

ಕೃಷಿ ವಿಜ್ಞಾನಿಗಳ ಹಾಗೂ ಕೃಷಿ ಇಲಾಖೆಯ ಜಾಗೃತಿ ಕಾರ್ಯಕ್ರಮಗಳೂ ಸಗಣಿ ಗೊಬ್ಬರ ಬಳಕೆಗೆ ಒಲುವು ತೋರುವಲ್ಲಿ ಪ್ರಮುಖ ಕಾರಣ ಎನ್ನುತ್ತಾರೆ ರೈತರು.

ಸಗಣಿ ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಬಂದಿದ್ದು, ಸದ್ಯ ಒಂದು ಟ್ರ್ಯಾಕ್ಟರ್ ಗೊಬ್ಬರಕ್ಕೆ 4ರಿಂದ 5 ಸಾವಿರ ರೂ., ಮಿನಿ ಲಾರಿಗೆ 12 ಸಾವಿರ ರೂ. ನೀಡಿ ಖರೀದಿಸಬೇಕಿದೆ. ಒಂದು ಬಾರಿ ಸಗಣಿ ಗೊಬ್ಬರ ಹೊಲದಲ್ಲಿ ಹಾಕಿದರೆ ಸುಮಾರು 3-4 ವರ್ಷ ಪೋಷಕಾಂಶ ಒದಗಿಸುತ್ತದೆ ಎನ್ನುವುದು ರೈತರ ಅನುಭವದ ಮಾತಾಗಿದೆ.



ಕುಷ್ಟಗಿ ತಾಲೂಕಿನ ಮುದೇನೂರು ಗ್ರಾಮದಲ್ಲಿ ರೈತರು ಹೊಲಕ್ಕೆ ಹಾಕಲು ಸಗಣಿ ಗೊಬ್ಬರ ತೆಗೆಯುತ್ತಿರುವುದು.

ಭೂಮಿ ಫಲವತ್ತತೆಗೆ ಸಗಣಿ ಗೊಬ್ಬರ ಅವಶ್ಯ

ಸ್ಥಳೀಯವಾಗಿ ಸಗಣಿ ಗೊಬ್ಬರ ದೊರಕುತ್ತಿಲ್ಲ. ಹೀಗಾಗಿ, ನೀರಾವರಿ ಪ್ರದೇಶದಿಂದ ಖರೀದಿಸಿ ರೈತರಿಗೆ ಸಗಣಿ ಗೊಬ್ಬರ ಪೂರೈಸಲಾಗುತ್ತಿದೆ. ಕಳೆದ 2 ವರ್ಷಗಳಿಂದ ಸಗಣಿ ಗೊಬ್ಬರ ಬಳಸುವವರ ಸಂಖ್ಯೆ ಹೆಚ್ಚಾಗಿದೆ. ರೈತರ ಅನುಕೂಲಕ್ಕಾಗಿ ಮಧ್ಯವರ್ತಿ ಕೆಲಸ ಮಾಡಲಾಗುತ್ತಿದೆ. ಒಳ್ಳೆಯ ಗೊಬ್ಬರ ಪತ್ತೆ ಹಚ್ಚಿ ರೈತರನ್ನು ಸಂಪರ್ಕಿಸಿ ಅವರಿಗೆ ಮಾರಾಟ ಮಾಡಲಾಗುತ್ತಿದೆ. ಸಗಣಿ ಗೊಬ್ಬರ ಬಳಸುವುದರಿಂದ ಭೂಮಿ ಫಲವತ್ತತೆ ಹೆಚ್ಚಾಗುವುದರ ಜತೆಗೆ ಲಘು ಪೋಷಕಾಂಶ, ತೇವಾಂಶ ಹೆಚ್ಚಾಗುತ್ತದೆ. ಆ ನಿಟ್ಟಿನಲ್ಲಿ ರೈತಾಪಿ ವರ್ಗದವರು ಸಗಣಿ ಗೊಬ್ಬರ ಬಳಕೆಗೆ ಆಸಕ್ತಿ ತೋರಬೇಕಿದೆ ಎಂದು ರೈತರಾದ ಶರಣಪ್ಪ, ಭೀಮನಗೌಡ, ಅಸೆನಮ್ಮ ಹೊಸಬಡಿಗೇರ "ಸಂಯುಕ್ತ ಕರ್ನಾಟಕ"ಕ್ಕೆ ತಿಳಿಸಿದರು.

31-01-2022
Sk Pg 07

ಜೀವವೈವಿಧ್ಯ ಸಾಮುದಾಯಿಕ ಬದುಕನ್ನು ಸಮತೋಲನಗೊಳಿಸುವ ಪ್ರಾಕೃತಿಕ ಕೊಡುಗೆ.
ಇದರೊಂದಿಗೆ ಪಾತರಗಿತ್ತಿಯ ಚಿತ್ತಾರ ಮನಸೊಗಸು. ಜಗಸೊಗಸು.

ಕಾರವಾರ-ಬೆಳಗಾವಿ ಹೆದ್ದಾರಿಯಲ್ಲಿ ನಿರ್ಮಾಣ | 25 ಲಕ್ಷ ವೆಚ್ಚ

ಮರೆಯಬಾರದ ಜೈವಿಕ ಕೊಂಡಿ ಚಿಟ್ಟೆ ಪಾರ್ಕ್

■ ವಾಸುದೇವ ಉಡಳ್ಳಿ

ಕಾರವಾರ: ಅಸಂಖ್ಯ ಜೀವ ವೈವಿಧ್ಯಗಳನ್ನು ಹೊಂದಿರುವ ಉತ್ತರ ಕನ್ನಡ ಜಿಲ್ಲೆಯ ಅರಣ್ಯದಲ್ಲಿರುವ ನೂರಾರು ಚಿಟ್ಟೆಗಳನ್ನು ಒಂದೇಕಡೆನೋಡುವಭಾಗ್ಯ ಇನ್ನುಪ್ರವಾಸಿಗರಿಗೆ ಲಭ್ಯವಾಗಲಿದೆ. ಕಾರವಾರ ಕಡಲ ತೀರ ನೋಡಲು ಹೋಗುವವರೊಮ್ಮೆ ಇನ್ನು ಈ ಚಿಟ್ಟೆ ಪಾರ್ಕ್ ನೋಡಿಕೊಂಡೇ ಹೋಗಬೇಕು. ಇಂತದೊಂದು ಚಿಟ್ಟೆ ಪಾರ್ಕ್ ಈಗ ಗೋಟೆಗಾಳಿಯಲ್ಲಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಎನ್‌ಪಿಸಿಐಎಲ್ ಕೈಗಾದ ಸಿಎಸ್‌ಆರ್ ಅನುದಾನದಡಿ ಗೋಟೆಗಾಳಿಯಲ್ಲಿ ಈ ಚಿಟ್ಟೆ ಪಾರ್ಕ್ ನಿರ್ಮಾಣ ಮಾಡಿದ್ದು ಲೋಕಾರ್ಪಣೆಗೊಂಡಿದೆ. ಪ್ರವಾಸಿಗರುಹಾಗೂಸ್ಥಳೀಯರನ್ನು ಆಕರ್ಷಿಸುವ ಚಿಟ್ಟೆ ಪಾರ್ಕ್ ನಿರ್ಮಾಣ ಮಾಡಲಾಗಿದೆ.

ಕಾರವಾರ-ಬೆಳಗಾವಿ ರಾಜ್ಯ ಹೆದ್ದಾರಿಯ ಗೋಟೆಗಾಳಿ ಬಳಿ ಎನ್‌ಪಿಸಿಐಎಲ್ ಕೈಗಾದ ಸಿಎಸ್‌ಆರ್ ಅನುದಾನದ 25 ಲಕ್ಷ ವೆಚ್ಚದಲ್ಲಿ 1 ಹೆಕ್ಟೇರ್ ಪ್ರದೇಶದಲ್ಲಿ ಚಿಟ್ಟೆ ಪಾರ್ಕ್ ನಿರ್ಮಾಣ ಮಾಡಲಾಗಿದೆ.

ಈ ಮೊದಲು ಅಕೇಶಿಯಾ ಹಾಗೂ ಕುರುಚಲು ಗಿಡಗಂಟಿಗಳಿಂದ ಕೂಡಿದ್ದ ಪ್ರದೇಶವನ್ನು ಆಕರ್ಷಕವಾಗಿರಿಸಲಾಗಿದೆ. ಆರಂಭದಲ್ಲಿಯೇ ಬೃಹತ್ ಚಿಟ್ಟೆಯಿಂದ ಪಾರ್ಕ್ ನಿರ್ಮಿಸಿದ್ದು ಸೊಗಸಾಗಿದೆ. ಮಾತ್ರವಲ್ಲದೆ ಸಾರ್ವಜನಿಕರಿಗೆ ಓಡಾಡಲು ವಾಕಿಂಗ್ ಪಾಥ್, ಕುಳಿತುಕೊಳ್ಳಲು ಚೇರ್, ಸಣ್ಣ ಪುಟ್ಟ ಕಾರ್ಯಕ್ರಮ ಆಯೋಜಿಸಲು ವೇದಿಕೆ ಹಾಗೂ ಮಕ್ಕಳ ಉದ್ಯಾನ ನಿರ್ಮಾಣ ಮಾಡಿದ್ದು, ಹೆದ್ದಾರಿ ಪಕ್ಕದಲ್ಲಿಯೇ ಇರುವ ಕಾರಣ ಸಾಕಷ್ಟು ಆಕರ್ಷಕವಾಗಿದೆ.



ಗೋಟೆಗಾಳಿಯಲ್ಲಿ ನಿರ್ಮಾಣ ಮಾಡಲಾದ ಪಾರ್ಕ್.

ಚಿಟ್ಟೆಗಳ ಸ್ವಚ್ಛಂದ ಹಾರಾಟ ಇನ್ನು ಚಿಟ್ಟೆ ಪಾರ್ಕ್‌ನಲ್ಲಿ ಹಲವು ಬಗೆಯ ಹೂ ಗಿಡಗಳನ್ನು ಬೆಳೆಸಲಾಗಿದ್ದು ಗಿಡಗಳಲ್ಲಿನ ಹೂಗಳ ಮಕರಂದ ಹೀರಲು ಚಿಟ್ಟಿಗಳ ಹಿಂಡೆ ಈ ಪ್ರದೇಶದಲ್ಲಿ ಕಂಡುಬರುತ್ತಿದೆ. ಕಾರ್ಯಕ್ರಮದ ಮೊದಲ ದಿನವೇ ಸುಮಾರು 100ಕ್ಕೂ ಹೆಚ್ಚು ಚಿಟ್ಟೆಗಳು ಪಾರ್ಕ್‌ನಲ್ಲಿ ಸ್ವಚ್ಛಂದವಾಗಿ ಹಾರಾಟ ನಡೆಸಿದ್ದು ಎಲ್ಲರ ಗಮನ ಸೆಳೆಯಿತು.

> ನಮ್ಮ ದೇಶದಲ್ಲಿ 1500ಕ್ಕೂ ಹೆಚ್ಚು ವಿವಿಧ ಬಗೆಯ ಚಿಟ್ಟೆಗಳಿವೆ. ಅವುಗಳ ಪೈಕಿ ನಮ್ಮ ದೇಶದಲ್ಲಿ ಮಾತ್ರ ಕಂಡುಬರುವ ಸುಮಾರು 150 ವಿಧದ ಚಿಟ್ಟೆಗಳಿದ್ದು ಉತ್ತರಕನ್ನಡ ಜಿಲ್ಲೆಯಲ್ಲಿಯೂ ಈ ಅಪರೂಪದ ಚಿಟ್ಟೆಗಳ ವಾಸಸ್ಥಾನವಾಗಿದೆ.
>
> ■ ವಸಂತ ರೆಡ್ಡಿ | ಡಿಎಫ್‌ಓ

31-01-2022 Sk Pg 07

31-01-2022 Sk Pg 04

ಕೃಷಿ ಸಾಧಕನ ಬಗ್ಗೆ ಪ್ರಧಾನಿ ಮೋದಿ ಮೆಚ್ಚುಗೆ

ನವದೆಹಲಿ: ಪದ್ಮಪ್ರಶಸ್ತಿ ಪುರಸ್ಕೃತರಲ್ಲಿ ಸೇರಿರುವ ಆಧುನಿಕ ಭಗೀರಥ, ಜಲಸಾಧಕ ರಾಗಿರುವಕರ್ನಾಟಕದಮಹಾಲಿಂಗನಾಯಕ್ ಸಾಧನೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಈ ಬಾರಿಯ ಮನ್ ಕಿ ಬಾತ್ ಬಾನುಲಿ ಕಾರ್ಯಕ್ರಮದಲ್ಲಿ ಬಹಳ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತೆರೆಯ ಹಿಂದಿನ ಸಾಧಕರಲ್ಲೊಬ್ಬರಾಗಿರುವ ಈ ಕೃಷಿಕ ಸಾಧಾರಣ ಪರಿಸ್ಥಿತಿಯಲ್ಲೂ ಅಸಾಧಾರಣ ಸಾಧನೆ ಮಾಡಿರುವ ಕುರಿತು ಪ್ರಧಾನಿ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಇವರು ಕೃಷಿಯಲ್ಲೂ ಎಂಥೆಂಥ ಆವಿಷ್ಕಾರ ಮಾಡಿದ್ದರೆಂದರೆ ಅಚ್ಚರಿ ಮೂಡುತ್ತದೆ. ಇವರ ಪ್ರಯತ್ನದ ಫಲ ಸಣ್ಣ ಹಿಡುವಳಿದಾರರಿಗೂ ದೊರೆಯುತ್ತಿದೆ ಎಂದವರು ಉಲ್ಲೇಖಿಸಿದ್ದಾರೆ.

ತಮ್ಮ ಮನ್ ಕಿ ಬಾತ್ ಸರಣಿಯ 84ನೇ ಕಾರ್ಯಕ್ರಮದಲ್ಲಿ ಪ್ರಧಾನಿಯವರು ಪದ್ಮಪುರಸ್ಕೃತರ ಸಾಧನೆಯ ಹೊರತಾಗಿ ಅಮರ್ ಜವಾನ್ ಜ್ಯೋತಿಯಲ್ಲಿ ಉರಿಯುವ ದೀಪವನ್ನು ರಾಷ್ಟ್ರೀಯ ಯುದ್ಧಸ್ಮಾರಕ ಜೊತೆ ವಿಲೀನಗೊಳಿಸಿರುವ ಹಾಗೂ ಮಹಾತ್ಮಾ ಗಾಂಧಿಯವರ ಪುಣ್ಯತಿಥಿಯಲ್ಲದೆ, ದೇಶವಿದೇಶಗಳ ಮಕ್ಕಳು ತಮಗೆ ಅಂಚೆ ಕಾರ್ಡ್ ಕಳುಹಿಸಿರುವ ವಿಷಯಗಳನ್ನು ಪ್ರಸ್ತಾವಿಸಿದ್ದಾರೆ. ರಾಷ್ಟ್ರೀಯ ಯುದ್ಧ ಸ್ಮಾರಕ ಬಳಿ ಇರುವ ಅಮರ್ ಜವಾನ್ ಜ್ಯೋತಿ ಹುತಾತ್ಮ ಯೋಧರಿಗೆ ಸಲ್ಲಿಸಬಹುದಾದ ಅತಿದೊಡ್ಡ ಗೌರವ. ಹೀಗಾಗಿ ತಮ್ಮ ಮಕ್ಕಳು, ಕುಟುಂಬಸ್ಥರೊಂದಿಗೆ ಈ ಜ್ಯೋತಿ ಸ್ಥಳಕ್ಕೆ ಭೇಟಿ ನೀಡುವಂತೆ ದೇಶದ ನಾಗರಿಕರಿಗೆ ಸಲಹೆ ನೀಡಿದ್ದಾರೆ. ದೇಶವಿದೇಶದ ಒಂದು ಕೋಟಿಗೂ ಅಧಿಕ ಮಕ್ಕಳು ತಮ್ಮ ಮನದಾಳದ ಮಾತುಗಳನ್ನು ಪೋಸ್ಟ್ ಕಾರ್ಡ್‌ಗಳ ಮೂಲಕ ತಮಗೆ ಕಳುಹಿಸಿದ್ದಾರೆ ಎಂದು ವಿವರಿಸಿದ್ದಾರೆ.